# ವಿಡಿಯೊ ಶಾಪಿಂಗ್‌ಗೆ ಗೂಗಲ್‌ನ 'ಶಾಪ್‌ಲೂಪ್'

■ **ಶಶಿಕುಮಾರ್ ಸಿ.**




ಉಪಯುಕ್ತವಾದ ಹಲವಾರು ಫೀಚರ್ಸ್‌ಗಳನ್ನು ಪರಿಚಯಿಸಿ ಬಳಕೆದಾರರ ಸ್ನೇಹಿ ಎನಿಸಿಕೊಂಡಿರುವ ಗೂಗಲ್, ಇದೀಗ ತನ್ನ ವಿಡಿಯೊ ಶಾಪಿಂಗ್ ಪ್ಲಾಟ್‌ಫಾರ್ಮ್ ಅನ್ನು ಪರಿಚಯಿಸ ಹೊರಟಿದೆ. ಇದಕ್ಕೆ 'ಶಾಪ್‌ಲೂಪ್' ಎಂದು ಹೆಸರಿಟ್ಟಿದೆ. ಈ ಪ್ಲಾಟ್‌ಫಾರ್ಮ್ ಸದ್ಯ ಪ್ರಾಯೋಗಿಕ ಹಂತದಲ್ಲಿದೆ.

'ಗೂಗಲ್ ವಿಡಿಯೊ ಏರಿಯಾ 120' ಎಂಬ ಪ್ರಾಯೋಗಿಕ ಯೋಜನೆಗಳಿಗಾಗಿ ಗೂಗಲ್‌ನ ಕಾರ್ಯಾಗಾರದಿಂದ ಈ ಪ್ಲಾಟ್‌ಫಾರ್ಮ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಒಂದೇ ವೇದಿಕೆಯಲ್ಲಿ ಶಾಪಿಂಗ್ ಮಾಡಲು ಗ್ರಾಹಕರಿಗೆ ಅವಕಾಶ ಕಲ್ಪಿಸುವುದಕ್ಕೆ ಗೂಗಲ್ ಈ ಪ್ಲ್ಯಾನ್ ರೂಪಿಸಿದ್ದು, ಸದ್ಯ ಗೂಗಲ್ ವಿಡಿಯೊ ಶಾಪಿಂಗ್ ಪ್ಲಾಟ್‌ಫಾರ್ಮ್‌ನಲ್ಲಿ ಇನ್‌ಕ್ಲೂಡ್ಸ್ ಡಿಸ್ಕವರಿಂಗ್, ಎವಾಲ್ಯುಎಟಿಂಗ್ ಆ್ಯಂಡ್ ಪ್ರೊಡಕ್ಟ್ಸ್ (**Includes discovering, evaluating and buying products**) ರೀತಿಯ ಸೇವೆಗಳನ್ನು ಒಂದೇ ವೇದಿಕೆಯಲ್ಲಿ ಒದಗಿಸುವುದಕ್ಕೆ ಸಿದ್ಧತೆ ನಡೆಸಿದೆ.

ಗೂಗಲ್ ತನ್ನ ಬಳಕೆದಾರರು ಬೇರೆ ಅಪ್ಲಿಕೇಶನ್‌ಗಳ ಮೊರೆ ಹೋಗದಂತೆ ತಡೆಯುವ ಮುಖ್ಯ ಉದ್ದೇಶ ಇದಾಗಿದೆ. ತನ್ನ ಗ್ರಾಹಕರಿಗೆ ಎಲ್ಲಾ ಮಾದರಿಯ ಸೇವೆಗಳನ್ನು ಒದಗಿಸುವ ಉದ್ದೇಶದ ಹಿನ್ನೆಲೆಯಲ್ಲಿ ಹೊಸ ಅಪ್ಲಿಕೇಶನ್ ರೂಪುಗೊಂಡಿದೆ.

### ಶಾಪ್‌ಲೂಪ್ ಕಾರ್ಯ ಹೇಗೆ?

ಶಾಪ್‌ಲೂಪ್‌ನಲ್ಲಿ, ವೀಡಿಯೊಗಳು ಕೇವಲ 90 ಸೆಕೆಂಡುಗಳಿಗಿಂತ ಕಡಿಮೆ ಅವಧಿಯನ್ನು ಹೊಂದಿರುತ್ತವೆ. ಈ ಅವಧಿಯೊಳಗೆ ಗ್ರಾಹಕರಿಗೆ ಅಗತ್ಯವಾದ ಉತ್ಪನ್ನಗಳ ಎಲ್ಲ ಮಾಹಿತಿಯನ್ನು ಒದಗಿಸಲಾಗುತ್ತದೆ. ಈ ವಿಡಿಯೊಗಳಲ್ಲಿ ನೀವು ಬಯಸುವ ಉತ್ಪನ್ನದ ಮಾಹಿತಿ, ಉತ್ಪನ್ನಗಳ ವಿಶೇಷತೆ, ಅದರ ಕ್ವಾಲಿಟಿ, ಅದರ ಬೆಲೆ ಇತರೆ ಮಾಹಿತಿಗಳ ಬಗ್ಗೆಯೂ ಇರುತ್ತದೆ. ಇದಕ್ಕಾಗಿ ಶಾಪ್‌ಲೂಪ್‌ನಲ್ಲಿ ಬ್ಯೂಟಿ ಪ್ರಾಡಕ್ಟ್, ಕಂಟೆಟ್ ಕ್ರಿಯೇಟರ್, ಪ್ರಕಾಶಕರು ಮತ್ತು ಆನ್‌ಲೈನ್ ಮಳಿಗೆಗಳ ಮಾಲೀಕರೊಂದಿಗೆ ಕನೆಕ್ಟಿವಿಟ ಹೊಂದುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಗೂಗಲ್ ಹೇಳಿದೆ.

### ಸೌಂದರ್ಯವರ್ಧಕಕ್ಕೆ ಆದ್ಯತೆ

ಶಾಪ್‌ಲೂಪ್‌ನಲ್ಲಿ ಸದ್ಯದ ಮಟ್ಟಿಗೆ ಸೌಂದರ್ಯವರ್ಧಕಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಮೇಕಪ್, ಚರ್ಮದ ರಕ್ಷಣೆ, ಕೂದಲು ಮತ್ತು ಉಗುರು ಸೇರಿದಂತೆ ನಾಲ್ಕು ವಿಭಾಗಗಳನ್ನು ಶಾಪ್‌ಲೂಪ್ ಪ್ರಸ್ತುತ ಪೂರೈಸುತ್ತದೆ. ಜೊತೆಗೆ ಇದರ ಮುಖಪುಟದಲ್ಲಿ ವಿಡಿಯೊಗಳನ್ನು ಸ್ವಯಂಚಾಲಿತವಾಗಿ ಪ್ರದರ್ಶಿಸುತ್ತದೆ. ಬಳಕೆದಾರರು ಈ ವಿಡಿಯೊವನ್ನು ಲೈಕ್‌ಮಾಡಬಹುದು, ಹಂಚಿಕೊಳ್ಳಬಹುದು ಮತ್ತು ಸೇವ್ ಮಾಡಬಹುದಾಗಿದೆ. ಅಲ್ಲದೆ ಈ ಪ್ರಾಡಕ್ಟ್‌ಗಳನ್ನು ಲೈಕ್ ಮಾಡಿದರೆ ಬಳಕೆದಾರರು ಖರೀದಿಸಬಹುದಾದ ವೆಬ್‌ಸೈಟ್‌ಗೆ ಲಿಂಕ್ ಲಭ್ಯವಾಗುತ್ತದೆ.

### ಅನುಕೂಲವೇನು?

ಈ ವಿಡಿಯೊಗಳ ಫ್ಲಾಟ್‌ಫಾರ್ಮ್‌ನಲ್ಲಿನ ಎಲ್ಲಾ ವಿಡಿಯೊಗಳು ಎಲ್ಲ ಗ್ರಾಹಕರನ್ನೂ ಆಕರ್ಷಿಸುವುದಿಲ್ಲ. ಆದರೆ ಒಂದು ವೇದಿಕೆಯಲ್ಲಿ ಶಾಪಿಂಗ್ ಮಾಡುವಾಗ ಗ್ರಾಹಕರು ಖರೀದಿಸಬಹುದಾದ ಉತ್ಪನ್ನಗಳನ್ನು ಗುರ್ತಿಸುವುದು, ಮೌಲ್ಯಮಾಪನ ಮಾಡುವುದು ಮತ್ತು ಖರೀದಿಸುವುದಕ್ಕೆ ಈ ಹೊಸ ಪ್ಲಾಟ್‌ಫಾರ್ಮ್ ಅವಕಾಶ ಕಲ್ಪಿಸುತ್ತದೆ. ಅಂದಹಾಗೆ, ಶಾಪ್‌ಲೂಪ್ ಅನ್ನು ಪ್ರಸ್ತುತ ಮೊಬೈಲ್ ಬ್ರೌಸರ್ ಮೂಲಕ ಮಾತ್ರ ಪ್ರವೇಶಿಸಬಹುದು. ಪ್ರಸ್ತುತ ಇದು ಗೂಗಲ್‌ನ ಪ್ರಾಯೋಗಿಕ ಯೋಜನೆಯಾಗಿದ್ದು, ಗ್ರಾಹಕರಿಗೆ ಯಾವಾಗ ಮುಕ್ತವಾಗಲಿದೆ ಎಂಬುದನ್ನು ಇನ್ನೂ ಗೂಗಲ್ ತಿಳಿಸಿಲ್ಲ. ■

